prepp

Practice, Learn and Achieve Your Goal with Prepp

# UGC NET Exam

Kannada


Simplifying
**Government Exams**

SSC CHSL | IAS EXAM | RRB NTPC | NTSE | CDS
SSC CGL | CBSE UGC NET | IBPS PO | NDA
SBI PO | IBPS CLERK | AFCAT | SSC JE | CTET
CSIR UGC NET | CAPF | IBPS RRB

www.prepp.in

# PAPER-II
# KANNADA

**Signature and Name of Invigilator**

1. (Signature) ____________________________

   (Name) ____________________________

2. (Signature) ____________________________

   (Name) ____________________________

OMR Sheet No. : ...............................................

(To be filled by the Candidate)

Roll No. | | | | | | | | |

(In figures as per admission card)

Roll No.____________________________________

(In words)

| D | 2 | 1 | 1 | 1 |
|---|---|---|---|---|

Time : 1 $^1/_4$ hours] [Maximum Marks : **100**

Number of Pages in this Booklet : **12**

Number of Questions in this Booklet : **50**

## Instructions for the Candidates

1. Write your roll number in the space provided on the top of this page.
2. This paper consists of fifty multiple-choice type of questions.
3. At the commencement of examination, the question booklet will be given to you. In the first 5 minutes, you are requested to open the booklet and compulsorily examine it as below :
   - (i) To have access to the Question Booklet, tear off the paper seal on the edge of this cover page. Do not accept a booklet without sticker-seal and do not accept an open booklet.
   - (ii) **Tally the number of pages and number of questions in the booklet with the information printed on the cover page. Faulty booklets due to pages/questions missing or duplicate or not in serial order or any other discrepancy should be got replaced immediately by a correct booklet from the invigilator within the period of 5 minutes. Afterwards, neither the Question Booklet will be replaced nor any extra time will be given.**
   - (iii) After this verification is over, the OMR Sheet Number should be entered on this Test Booklet.
4. Each item has four alternative responses marked (A), (B), (C) and (D). You have to darken the oval as indicated below on the correct response against each item.

   **Example :** (A) (B) ⬤ (D)

   where (C) is the correct response.
5. Your responses to the items are to be indicated in the **Answer Sheet given inside the Paper I Booklet only.** If you mark at any place other than in the ovals in the Answer Sheet, it will not be evaluated.
6. Read instructions given inside carefully.
7. Rough Work is to be done in the end of this booklet.
8. If you write your Name, Roll Number, Phone Number or put any mark on any part of the Answer Sheet, except for the space allotted for the relevant entries, which may disclose your identity, or use abusive language or employ any other unfair means, you will render yourself liable to disqualification.
9. You have to return the test question booklet and OMR Answer sheet to the invigilators at the end of the examination compulsorily and must not carry it with you outside the Examination Hall.
10. **Use only Blue/Black Ball point pen.**
11. **Use of any calculator or log table etc., is prohibited.**
12. **There is no negative marks for incorrect answers.**

## परीक्षार्थियों के लिए निर्देश

1. पहले पृष्ठ के ऊपर नियत स्थान पर अपना रोल नम्बर लिखिए ।
2. इस प्रश्न-पत्र में पचास बहुविकल्पीय प्रश्न हैं ।
3. परीक्षा प्रारम्भ होने पर, प्रश्न-पुस्तिका आपको दे दी जायेगी । पहले पाँच मिनट आपको प्रश्न-पुस्तिका खोलने तथा उसकी निम्नलिखित जाँच के लिए दिये जायेंगे, जिसकी जाँच आपको अवश्य करनी है :
   - (i) प्रश्न-पुस्तिका खोलने के लिए उसके कवर पेज पर लगी कागज की सील को फाड़ लें । खुली हुई या बिना स्टीकर-सील की पुस्तिका स्वीकार न करें ।
   - (ii) **कवर पृष्ठ पर छपे निर्देशानुसार प्रश्न-पुस्तिका के पृष्ठ तथा प्रश्नों की संख्या को अच्छी तरह चैक कर लें कि ये पूरे हैं । दोषपूर्ण पुस्तिका जिनमें पृष्ठ/प्रश्न कम हों या दुबारा आ गये हों या सीरियल में न हों अर्थात् किसी भी प्रकार की त्रुटिपूर्ण पुस्तिका स्वीकार न करें तथा उसी समय उसे लौटाकर उसके स्थान पर दूसरी सही प्रश्न-पुस्तिका ले लें । इसके लिए आपको पाँच मिनट दिये जायेंगे । उसके बाद न तो आपकी प्रश्न-पुस्तिका वापस ली जायेगी और न ही आपको अतिरिक्त समय दिया जायेगा ।**
   - (iii) इस जाँच के बाद OMR पत्रक की क्रम संख्या इस प्रश्न-पुस्तिका पर अंकित कर दें ।
4. प्रत्येक प्रश्न के लिए चार उत्तर विकल्प (A), (B), (C) तथा (D) दिये गये हैं । आपको सही उत्तर के दीर्घवृत्त को पेन से भरकर काला करना है जैसा कि नीचे दिखाया गया है ।

   **उदाहरण :** (A) (B) ⬤ (D)

   जबकि (C) सही उत्तर है ।
5. प्रश्नों के उत्तर **केवल प्रश्न पत्र I के अन्दर दिये गये उत्तर-पत्रक पर ही** अंकित करने हैं । यदि आप उत्तर पत्रक पर दिये गये दीर्घवृत्त के अलावा किसी अन्य स्थान पर उत्तर चिह्नांकित करते हैं, तो उसका मूल्यांकन नहीं होगा ।
6. अन्दर दिये गये निर्देशों को ध्यानपूर्वक पढ़ें ।
7. कच्चा काम (Rough Work) इस पुस्तिका के अन्तिम पृष्ठ पर करें ।
8. यदि आप उत्तर-पुस्तिका पर नियत स्थान के अलावा अपना नाम, रोल नम्बर, फोन नम्बर या कोई भी ऐसा चिह्न जिससे आपकी पहचान हो सके, अंकित करते हैं अथवा अभद्र भाषा का प्रयोग करते हैं, या कोई अन्य अनुचित साधन का प्रयोग करते हैं, तो परीक्षा के लिये अयोग्य घोषित किये जा सकते हैं ।
9. आपको परीक्षा समाप्त होने पर प्रश्न-पुस्तिका एवं OMR उत्तर-पत्रक निरीक्षक महोदय को लौटाना आवश्यक है और परीक्षा समाप्ति के बाद उसे अपने साथ परीक्षा भवन से बाहर न लेकर जायें ।
10. **केवल नीले/काले बाल प्वाईंट पेन का ही इस्तेमाल करें ।**
11. **किसी भी प्रकार का संगणक (कैलकुलेटर) या लाग टेबल आदि का प्रयोग वर्जित है ।**
12. **गलत उत्तरों के लिए कोई अंक काटे नहीं जाएँगे ।**



Latest Sarkari Jobs, Govt Exam Results, Vacancies and updates on one click
Know More

## KANNADA
## Paper – II

**Note :** This paper contains **fifty (50)** objective type questions, each question carrying **two (2)** marks. Attempt **all** the questions.

**ಸೂಚನೆ :** ಈ ಪತ್ರಿಕೆಯಲ್ಲಿ ಬಹು ಆಯ್ಕೆಯ **ಐವತ್ತು (50)** ಪ್ರಶ್ನೆಗಳಿರುತ್ತವೆ. ಪ್ರತಿಯೊಂದು ಪ್ರಶ್ನೆಗೂ **ಎರಡು (2)** ಅಂಕಗಳು ಇರುತ್ತವೆ. ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿರಿ.

**ಏಕ ಆಯ್ಕೆಯ ಮಾದರಿಯ ಪ್ರಶ್ನೆಗಳು :**

**1.** ಬುಕ್ಕರಾಯನ ಧರ್ಮಸಮನ್ವಯವನ್ನು ತಿಳಿಸುವ ಶಾಸನ

(A) ಹಲ್ಮಿಡಿ ಶಾಸನ

(B) ಶ್ರವಣ ಬೆಳಗೊಳ ಶಾಸನ

(C) ಆತಕೂರು ಶಾಸನ

(D) ಬಾದಾಮಿ ಶಾಸನ

**2.** ಇದು ಭಾಮಿನಿ ಷಟ್ಪದಿಯ ಕೃತಿ

(A) ತೊರವೆ ರಾಮಾಯಣ

(B) ಜೈಮಿನಿ ಭಾರತ

(C) ವೀರೇಶ ಚರಿತೆ

(D) ಮೋಹನ ತರಂಗಿಣಿ

**3.** ಚಾವುಂಡರಾಯನಿಗೆ ಆಶ್ರಯವಿತ್ತ ಅರಸ

(A) ಜಗದೇಕ ಮಲ್ಲ

(B) ಆಹವ ಮಲ್ಲ

(C) ರಾಚಮಲ್ಲ

(D) ಮೂರನೆಯ ಕೃಷ್ಣ

**4.** 'ಪಾೞಿ ನಿಲೆ ನೆಗೞ್ ಬಾೞ್ವುದು ಬಾೞ್ಗೆಂಬುದು ನಿಕ್ಕುವಂ' ಎಂದು ಹೇಳಿರುವವನು

(A) ಪಂಪ

(B) ಶಿವಕೋಟ್ಯಾಚಾರ್ಯ

(C) ಜನ್ನ

(D) ಶ್ರೀವಿಜಯ

**5.** 'ಪಂಪಭಾರತ ದೀಪಿಕೆ'ಯ ಕರ್ತೃ

(A) ಪಂಪ

(B) ಅಭಿನವ ಪಂಪ

(C) ಡಿ. ಎಲ್. ನರಸಿಂಹಾಚಾರ್

(D) ಎಲ್. ಬಸವರಾಜು

**6.** 'ಕರಣ ಹಸುಗೆ' ರಚಿಸಿದ ಕರ್ತೃ

(A) ಚೆನ್ನಬಸವಣ್ಣ

(B) ಅಲ್ಲಮಪ್ರಭು

(C) ಸಿದ್ಧರಾಮ

(D) ಜೇಡರ ದಾಸಿಮಯ್ಯ

**7.** 'ಗೋರಕ್ಷ ಪ್ರಸಂಗ' ವನ್ನು ಒಳಗೊಂಡ ಕೃತಿ

(A) ಗಿರಿಜಾ ಕಲ್ಯಾಣ

(B) ಸೃಷ್ಟಿಯ ವಚನಗಳು

(C) ಪ್ರಭುಲಿಂಗ ಲೀಲೆ

(D) ಶರಭ ಚಾರಿತ್ರ್ಯ

**8.** ವಾದಿರಾಜರು ಜೀವಿಸಿದ್ದ ಕಾಲ

(A) ಹದಿನಾಲ್ಕನೆ ಶತಮಾನ

(B) ಹದಿನಾರನೆ ಶತಮಾನ

(C) ಹದಿಮೂರನೆ ಶತಮಾನ

(D) ಹದಿನೆಂಟನೆ ಶತಮಾನ



Latest Sarkari Jobs, Govt Exam Results, Vacancies and updates on one click
Know More

9. ‘ಕರ್ನಾಟಕ ಕವಿ ಚೂತವನ ಚೈತ್ರ’ ಎಂಬ ಬಿರುದನ್ನು ಹೊಂದಿದ ಕವಿ
(A) ಕುಮಾರ ವ್ಯಾಸ
(B) ಭೀಮಕವಿ
(C) ನಂಜುಂಡ
(D) ಲಕ್ಷ್ಮೀಶ

10. ‘A Comparative Grammar of Dravidian languages’ ಗ್ರಂಥದ ರಚಕ
(A) ರಾಬರ್ಟ್ ಕಾಲ್ಡ್‌ವೆಲ್
(B) ಫರ್ಡಿನೆಂಡ್ ಕಿಟೆಲ್
(C) ಇ.ಪಿ. ರೈಸ್
(D) ಟಿ. ಬರೊ

11. ‘ಒಥೆಲೋ’ ನಾಟಕವನ್ನು ‘ಪ್ರತಾಪರುದ್ರದೇವ’ ಎಂಬ ಹೆಸರಿನಲ್ಲಿ ಅನುವಾದಿಸಿದವರು
(A) ಬಸವಪ್ಪ ಶಾಸ್ತ್ರೀ
(B) ಡಿ. ಜವರೇ ಗೌಡ
(C) ಶ್ರೀಕಂಠೇಶ ಗೌಡ
(D) ರಾಮಚಂದ್ರ ದೇವ

12. ‘ಮಾಧವ ಕರುಣಾವಿಲಾಸ’ ಕೃತಿರಚನೆ ಮಾಡಿದವರು
(A) ಪುರಂದರ ದಾಸ
(B) ಗಳಗನಾಥ
(C) ವೆಂಕಟಾಚಲ ಶಾಸ್ತ್ರೀ
(D) ಪು. ತಿ. ನರಸಿಂಹಾಚಾರ್

13. ಬೇಂದ್ರೆಯವರ ಮೊದಲ ಪ್ರಕಟಿತ ಕವನ
(A) ಸಖೀಗೀತ
(B) ನಾಕುತಂತಿ
(C) ಉಯ್ಯಾಲೆ
(D) ಕೃಷ್ಣಾಕುಮಾರಿ

14. ‘ಹಾಲುಮತ ದರ್ಶನ’ ಕೃತಿಯ ರಚಕ
(A) ಶಂ.ಬಾ. ಜೋಶಿ
(B) ಗೋವಿಂದ ಪೈ
(C) ತೀ.ನಂ.ಶ್ರೀಕಂಠಯ್ಯ
(D) ಸೇಡಿಯಾಪು ಕೃಷ್ಣಭಟ್ಟ

15. ‘ಚಕೋರಿ’ ಕೃತಿಯ ರಚನಕಾರರು
(A) ಕುವೆಂಪು
(B) ಚಂದ್ರಶೇಖರ ಕಂಬಾರ
(C) ವಿ. ಕೃ. ಗೋಕಾಕ
(D) ರಾಮಚಂದ್ರ ಶರ್ಮ

16. ‘ವಾಕ್ಯಂ ರಸಾತ್ಮಕಂ ಕಾವ್ಯಂ’ ಎಂದು ಹೇಳಿದ ಮೀಮಾಂಸಕ
(A) ಅಭಿನವ ಗುಪ್ತ
(B) ಲೊಲ್ಲಟ
(C) ವಿಶ್ವನಾಥ
(D) ಕುಂತಕ

17. ‘Ars Poetica’ ಎಂಬ ಗ್ರಂಥವನ್ನು ಬರೆದವನು
(A) ಅರಿಸ್ಟಾಟಲ್
(B) ಹೊರೇಸ್
(C) ಲಾಂಜಿನಸ್
(D) ಪ್ಲೇಟೊ

18. ವಸಾಹತೋತ್ತರ ಚಿಂತನೆಯ ಪ್ರತಿಪಾದಕ
(A) ಡೆರಿಡಾ
(B) ಟಿ ಎಸ್. ಈಲಿಯಟ್
(C) ಸಿ.ಡಿ. ಲೂವಿಸ್
(D) ಐ.ಎ. ರಿಚರ್ಡ್ಸ್



Latest Sarkari Jobs, Govt Exam Results, Vacancies and updates on one click
Know More

**19.** 'ರಾಮ' ಪದವು ಈ ಆಕೃತಿಮಾ

(A) ಬದ್ಧ ಆಕೃತಿಮಾ

(B) ಶೂನ್ಯ ಆಕೃತಿಮಾ

(C) ಸ್ವತಂತ್ರ ಆಕೃತಿಮಾ

(D) ರಿಕ್ತ ಆಕೃತಿಮಾ

**20.** ಗೃಹಕೆಲಸ ಎಂಬ ಪದ ಈ ಸಮಾಸಕ್ಕೆ ಉದಾಹರಣೆ

(A) ಅಂಶಿ ಸಮಾಸ

(B) ಅರಿಸಮಾಸ

(C) ಷಷ್ಟೀ ತತ್ಪುರುಷ

(D) ಗಮಕಸಮಾಸ

**ಬಹು ಆಯ್ಕೆಯ ಮಾದರಿಗಳು :**

**21.** ಇವು ಗದ್ಯ ಕೃತಿಗಳು

(i) ಚಾವುಂಡರಾಯ ಪುರಾಣ ಮತ್ತು ಬಸವರಾಜ ವಿಜಯ

(ii) ಚಾವುಂಡರಾಯ ಪುರಾಣ ಮತ್ತು ಚಿಕದೇವರಾಯ ವಂಶಾವಳಿ

(iii) ವಡ್ಡಾರಾಧನೆ ಮತ್ತು ಭಾವಚಿಂತಾರತ್ನ

(iv) ರಾಜಾವಳಿ ಕಥೆ ಮತ್ತು ವಡ್ಡಾರಾಧನೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) ii ಮತ್ತು iii

(B) i ಮತ್ತು iv

(C) iii ಮತ್ತು i

(D) ii ಮತ್ತು iv

**22.** ಇವು ಹರಿಹರನ ಕೃತಿಗಳು

(i) ಗಿರಿಜಾ ಕಲ್ಯಾಣ ಮತ್ತು ನಂಬಿಯಣ್ಣನ ರಗಳೆ.

(ii) ಗಿರಿಜಾ ಕಲ್ಯಾಣ ಮತ್ತು ಹರಿಶ್ಚಂದ್ರ ಕಾವ್ಯ

(iii) ನಂಬಿಯಣ್ಣನ ರಗಳೆ ಮತ್ತು ವೀರೇಶ ಚರಿತೆ

(iv) ಪಂಪಾಶತಕ ಮತ್ತು ರಕ್ಷಾಶತಕ

**ಇವುಗಳಲ್ಲಿ ಸರಿಯಾದ ಉತ್ತರ :**

(A) i ಮತ್ತು iv (B) iii ಮತ್ತು i

(C) i ಮತ್ತು iv (D) ii ಮತ್ತು iv

**23.** ಮಧುರಚೆನ್ನರ ಕೃತಿಗಳು

(i) ನನ್ನ ನಲ್ಲ ಮತ್ತು ಕಾಳರಾತ್ರಿ

(ii) ಪೂರ್ವರಂಗ ಮತ್ತು ಬೆಳಗು

(iii) ನನ್ನ ನಲ್ಲ ಮತ್ತು ಅರಳುಮರಳು

(iv) ಕಾಳರಾತ್ರಿ ಮತ್ತು ಪಕ್ಷಿಕಾಶಿ

**ಇವುಗಳಲ್ಲಿ ಸರಿಯಾದ ಉತ್ತರ :**

(A) i ಮತ್ತು ii (B) i ಮತ್ತು iv

(C) ii ಮತ್ತು iii (D) iii ಮತ್ತು i

**24.** ಇವು ಚದುರಂಗರ ಕಾದಂಬರಿಗಳು

(i) ವೈಶಾಖ ಮತ್ತು ಚಿರಸ್ಮರಣೆ

(ii) ವೈಶಾಖ ಮತ್ತು ಹೆಜ್ಜಾಲ

(iii) ಹೆಜ್ಜಾಲ ಮತ್ತು ಸಂಧ್ಯಾರಾಗ

(iv) ಸರ್ವಮಂಗಳಾ ಮತ್ತು ಉಯ್ಯಾಲೆ

**ಇವುಗಳಲ್ಲಿ ಸರಿಯಾದ ಉತ್ತರ :**

(A) i ಮತ್ತು iv (B) ii ಮತ್ತು i

(C) ii ಮತ್ತು iv (D) iii ಮತ್ತು iv



Latest Sarkari Jobs, Govt Exam Results, Vacancies and updates on one click
Know More

**25.** ಎ. ಎನ್. ಮೂರ್ತಿರಾಯರ ಕೃತಿಗಳು

(i) ಅಲೆಯುವ ಮನ ಮತ್ತು ಹವಳದ್ವೀಪ

(ii) ಸಂಜೆಗಣ್ಣಿನ ಹಿನ್ನೋಟ ಮತ್ತು ಕಮ್ಮಾರಿ ವೀರಭದ್ರಾಚಾರಿ

(iii) ಸಂಜೆಗಣ್ಣಿನ ಹಿನ್ನೋಟ ಮತ್ತು ಪಾತಾಳದಲ್ಲಿ ಪಾಪಚ್ಚಿ

(iv) ಚಿತ್ರಗಳು, ಪತ್ರಗಳು ಮತ್ತು ದೇವರು

**ಇವುಗಳಲ್ಲಿ ಸರಿಯಾದ ಉತ್ತರ :**

(A) i ಮತ್ತು iii (B) ii ಮತ್ತು iii

(C) i ಮತ್ತು ii (D) i ಮತ್ತು iv

**26.** ಇವು ಅನುಪಮಾ ನಿರಂಜನರ ಕೃತಿಗಳು

(i) ದಾಂಪತ್ಯ ದೀಪಿಕೆ ಮತ್ತು ಹಿಮದ ಹೂ

(ii) ಕೇಳು ಕಿಶೋರಿ ಮತ್ತು ಎರಡು ಕನಸು

(iii) ಸಂಕೋಲೆಯೊಳಗಿಂದ ಮತ್ತು ಒಡಲು

(iv) ಹೂಮುಳ್ಳು ಮತ್ತು ಹೊಸ ಬೆಳಕು

**ಇವುಗಳಲ್ಲಿ ಸರಿಯಾದ ಉತ್ತರ :**

(A) iv ಮತ್ತು i (B) i ಮತ್ತು iii

(C) ii ಮತ್ತು i (D) iii ಮತ್ತು ii

**27.** ರಸವನ್ನು ಕುರಿತು ಚರ್ಚಿಸಿದ ಮೀಮಾಂಸಕಾರರು

(i) ಭರತ ಮತ್ತು ಭಟ್ಟ ಲೊಲ್ಲಟ

(ii) ಶ್ರೀಶಂಕುಕ ಮತ್ತು ಅಭಿನವ ಗುಪ್ತ

(iii) ಅಭಿನವ ಗುಪ್ತ ಮತ್ತು ಆನಂದವರ್ಧನ

(iv) ಭಟ್ಟ ಲೊಲ್ಲಟ ಮತ್ತು ದಂಡಿ

**ಇವುಗಳಲ್ಲಿ ಸರಿಯಾದ ಉತ್ತರ :**

(A) i ಮತ್ತು ii (B) ii ಮತ್ತು iii

(C) iv ಮತ್ತು i (D) iii ಮತ್ತು i

**28.** ಇವರು ರೊಮ್ಯಾಂಟಿಕ್ ಪಂಥದ ವಿಮರ್ಶಕರು

(i) ಕ್ರೋಚೆ ಮತ್ತು ಎಫ್. ಆರ್. ಲೂವಿಸ್

(ii) ಕ್ರೋಚೆ ಮತ್ತು ಮ್ಯಾಥ್ಯೂ ಅರ್ನಾಲ್ಡ್

(iii) ಸಾಮ್ಯುವೆಲ್ ಜಾನ್ಸನ್ ಮತ್ತು ಎಜ್ರಾಪೌಂಡ್

(iv) ಎಡ್ವರ್ಡ್ ಸಯೀದ್ ಮತ್ತು ಎಜ್ರಾಪೌಂಡ್

**ಇವುಗಳಲ್ಲಿ ಸರಿಯಾದ ಉತ್ತರ :**

(A) ii ಮತ್ತು iv

(B) i ಮತ್ತು ii

(C) ii ಮತ್ತು iii

(D) iv ಮತ್ತು i

**29.** ಇವು ಅರ್ಥಸಂಕೋಚಕ್ಕೆ ಉದಾಹರಣೆಗಳು :

(i) ಕೂಳ್ (ii) ಕಂಪು

(iii) ಕುಪ್ಪಸ (iv) ಕಾಗದ

**ಇವುಗಳಲ್ಲಿ ಸರಿಯಾದ ಉತ್ತರ :**

(A) i ಮತ್ತು iv

(B) ii ಮತ್ತು iii

(C) iv ಮತ್ತು iii

(D) i ಮತ್ತು iii

**30.** ಇವು ಅನ್ಯಭಾಷಿಕ ಪದಗಳು

(i) ಫಿರಂಗಿ (ii) ಎಲೆ

(iii) ಧರ್ಮ (iv) ಮರ

**ಇವುಗಳಲ್ಲಿ ಸರಿಯಾದ ಉತ್ತರ :**

(A) i ಮತ್ತು ii

(B) i ಮತ್ತು iii

(C) ii ಮತ್ತು iv

(D) iii ಮತ್ತು iv



Latest Sarkari Jobs, Govt Exam Results, Vacancies and updates on one click
Know More

**ಲೇಖನ ಭಾಗ ಆಧಾರಿತ ಆಯ್ಕೆಯ ಮಾದರಿ**

**ಸೂಚನೆ : ಈ ಕೆಳಗಿನ ಲೇಖನಭಾಗವನ್ನು ಓದಿ ಅದನ್ನು ಆಧರಿಸಿದ ಪ್ರಶ್ನೆಗಳಿಗೆ ಉತ್ತರಿಸಿರಿ. ಸರಿಯಾದ ಉತ್ತರಗಳ ಸಂಜ್ಞೆಗಳನ್ನು ನಿಗದಿತ ಸ್ಥಳಗಳಲ್ಲಿ ಗುರುತಿಸಿರಿ.**

ಬೇಂದ್ರೆಯವರನ್ನು ಕುರಿತು ಚಿಂತಿಸುವಾಗ ನನಗೆ ಮತ್ತೆ ಮತ್ತೆ ಜಗವಿಖ್ಯಾತ ಮಹಾಕವಿ ಡಬ್ಲೂ.ಬಿ. ಯೇಟ್ಸನ ನೆನಪು ಕಾಡುತ್ತದೆ. ಈ ಕವಿಯ ಕಲಾವಂತಿಕೆ, ಕವನ ಕೌಶಲ್ಯದ ನವಿರು, ಬೆರಗು, ಬೆಡಗು, ಸೊಬಗು ಕೆಲವಂಶಗಳಲ್ಲಿ, ಟೆನಿಸನ್, ಕೀಟ್ಸ್, ಶೆಲ್ಲಿ ಪ್ರಭೃತಿಗಳ ಕಮ್ಮಟದಲ್ಲಿ ಇವರನ್ನು ನಿಲ್ಲಿಸುವಂತೆ ತೋರಿದರೂ, ಈ ಪ್ರತಿಭೆಯ ವಿಶಿಷ್ಟ, ನಿಗೂಢ, ಹಾಗೂ ವಿಚಿತ್ರ ಉತ್ಥಾನ, ಉನ್ಮನ ಪ್ರಜ್ಞೆ ಇವರನ್ನು ಕಾಲರಿಜ್, ಬ್ಲೇಕ್ ಮತ್ತು ಯೇಟ್ಸರ ಪಜ್ತೆಗೇ ಸಲ್ಲಿಸುವಂತಿದೆ. ವರ್ಡ್ಸ್‌ವರ್ಥ್ ಕವಿಯಂತೆ ಇವರಿಗೂ ಪ್ರಕೃತಿ-ನಿಸರ್ಗ ಒಂದು ದಿವ್ಯ ಪ್ರತಿಷ್ಠಾನ ಚೈತನ್ಯದ ಅಧಿಷ್ಠಾನ. ಭೂಮಿತಾಯಿ 'ಮೊದಲಗಿತ್ತಿ' ಯಂತೆ ಮೆರೆಯುತ್ತಾಳೆ. 'ಪ್ರಕೃತಿ ಮಾತೆ' ಚಿಗರಿಗಂಗಳ ಚೆಲುವೆ ಬೆದರಿ ನಿಂತಾಳೆ. 'ಹೂತ ಹುಣಸೆ' ಒಂದೇ ಸಾಕಾಗುತ್ತದೆ ಇವರ ಮನಃಶಾಂತಿಗೆ. ಆದರೆ ಆ ಆಂಗ್ಲ ಕವಿಯಂತೆ ನಿಸರ್ಗವೇ ಇವರ ಇಷ್ಟದೈವವಲ್ಲ. ಕೃಷ್ಣನೇ ಕವಿ, ಕುಮಾರ ವ್ಯಾಸ ಅವನ ಲಿಪಿಕಾರನಾದಂತೆ. ಈ ಕವಿ ನಿಸರ್ಗದ ಕೈಯ ಲೆಕ್ಕಣಿಕೆಯಲ್ಲ. ಅದನ್ನೂ ಮೀರಿದೆ ಇವರ ಬ್ರಹ್ಮಾಂಡವ್ಯಾಪಿಯಾದ ವಿಶ್ವಚೇತನದ ಭಗವತ್ಪ್ರಜ್ಞೆ. ಅದೇ ರೀತಿ ಯಂತೆ, ಕೀಟ್ಸ್ ಕವಿಯಂತೆ ಇವರ ಪ್ರತಿಭೆಯೂ ಸಮುಜ್ವಲ ಶ್ರೀಮದೂರ್ಜಿತ ಸತ್ವ, ಕಲ್ಪನೆಯ ಸ್ವೈರ ವಿಲಾಸದಲ್ಲಿ, ಅದರ ಗಣಿಯಲ್ಲಿ ಪ್ರತಿಯೊಂದು ಸೆರೆಯಲ್ಲಿಯೂ ಚಿನ್ನದ ಅದಿರು ಕಿಕ್ಕಿರಿದು ತುಂಬಿದೆ. ಆದರೆ ಕೀಟ್ಸನ ಸೌಂದರ್ಯತತ್ವವನ್ನು ಒಳಗೊಂಡು ಮೀರುವ ಮಾಂಗಲ್ಯ ಭಾವವೊಂದು ಇವರ ಕಾವ್ಯ-ಸತ್ವದ ತಥ್ಯವಾಗಿದೆ. ಕೃತಿರಚನೆಯ ಕಲೆಗಾರಿಕೆಯಲ್ಲಿ ಬೇಂದ್ರೆ, ಶೆಲ್ಲಿಯ ಹಾಸನ್ನು, ಟೆನಿಸನ್‌ನ ಬೀಸನ್ನು ತನ್ನ ಜಾಡಿನಲ್ಲಿ ನೆಯ್ದಿದ್ದಾರೆ. ಆದರೂ ಇಲ್ಲಿ ಅದಕ್ಕೂ ಆಚೆಯ ಒಂದು ಪಾರಮಾರ್ಥಿಕವೋ ಪರಾಪ್ರಕೃತಿಯದೋ ಪರಿಸ್ಪಂದವೂ ಚಿನ್ನದ ಎಳೆಯಂತೆ ಸೇರಿಕೊಂಡಿರುತ್ತದೆ.

ಆ ಮಟ್ಟದಲ್ಲಿ ಬೇಂದ್ರೆ ಯೇಟ್ಸ್ ಕವಿಯ ಗೋತ್ರಕ್ಕೆ ಸೇರಿದವರಾಗಿ ತೋರುತ್ತಾರೆ. ಟೆನಿಸನ್, ಬ್ರೌನಿಂಗ್ ಪ್ರಭೃತಿಗಳಲ್ಲಿ ವೈಜ್ಞಾನಿಕ, ಬೌದ್ಧಿಕ ಅಭಿಪ್ರಾಯಗಳ ಚಿಂತನೆ ಅವರ ಕಾವ್ಯದ ಅಂತರ್ಜ್ಯೋತಿಯನ್ನೇ ನಂದಿಸುತ್ತದೆ. ಬೇಂದ್ರೆ ಕಾವ್ಯದಲ್ಲಿ ಹಾಗೆ ಆಗುವುದಿಲ್ಲ. ಯೇಟ್ಸನ



Latest Sarkari Jobs, Govt Exam Results, Vacancies and updates on one click
Know More

ಅಭಿಪ್ರಾಯನ್ನೇ ಇವರ ಕಾವ್ಯಧರ್ಮ ಹೋಲುತ್ತದೆ. ಇಲ್ಲಿ ಕೇವಲ ಪ್ರಕೃತಿವರ್ಣನೆಗಾಗಿ ಪ್ರಕೃತಿವರ್ಣನೆ ಬರುವದಿಲ್ಲ. ನೀತಿ-ಧರ್ಮದ ಬೋಧಕ್ಕಾ-ಗಿಯೇ ನೀತಿ-ಧರ್ಮ ಬರುವದಿಲ್ಲ. ಯೇಟ್ಸ್ ಅನ್ನುವಂತೆ, ಇಂಥ ಕಾವ್ಯದಲ್ಲಿ ಪರಿಣಾಮ-ಕ್ಕಾಗಿಯೇ, ಪ್ರಯೋಗದ ಯಶಸ್ಸಿಗಾಗಿಯೇ ಆಡಿಸಿ ತೋರುವ ಕಸುವಿನ, ರಭಸದ ಲಯ ಬಂಧಗಳಿಲ್ಲ. ಇಲ್ಲಿ "ಮಸೆದ ಗಾಳಿ ಪಕ್ಕ ಪಡೆಯುವ ಸಹಜ ಪ್ರಾಸ". ಇಲ್ಲಿಯ ಲಯಗಾರಿಕೆ ಸಜೀವಸ್ಪಂದಕ್ಕೆ ಹೊಂದಿದ್ದು. ಚಿಂತನಕ್ಕೆ ಇಂಬುಗೊಡುವಂತಹದು - ಸ್ವಚ್ಛಂದ ನಾಡಿಸ್ಪಂದದಂತೆ. ಉಸಿರುಗಟ್ಟಿ-ಕೊಂಡು ಶರ್ಯತ್ತಿನಲ್ಲಿ ಓಡಿದಂತೆ ಅಲ್ಲ. ಇಲ್ಲಿ ಕವಿ ನವ್ಯವನ್ನೇನೂ ಸಾಧಿಸಲು ಹೊರಟಿಲ್ಲ. ಇದು ಮಾನವ್ಯದ ಉಪಾಸನೆ - ಉದ್ಗಾರ. ಉಷಾಸೂಕ್ತವಿರಲಿ, ಅಗ್ನಿಸೂಕ್ತವಿರಲಿ, ಸೌಂದರ್ಯಲಹರಿ ಇರಲಿ, ಓಮರನ ರುಬಾಯಾದ ತರ್ಜುಮೆ ಇರಲಿ, ಹಕ್ಕಿ ಹಾರುತ್ತಿರಲಿ, ಬೆಕ್ಕು ಹಾರುತ್ತಿರಲಿ. ಇಲ್ಲಿ ಪ್ರತಿಮೆ ಪ್ರತೀಕತ್ವವನ್ನು ತಾಳಿ ತಾಳಿ ನಿಲ್ಲಬಲ್ಲ ಸತ್ವ ಪಡೆಯಲು ಕಾರಣ, ಯೇಟ್ಸ್ ಕವಿಯಂತೆಯೇ ಬೇಂದ್ರೆ ನಿಜವಾದ ಜೀವಂತವಾದ ಜನಪದ ಸಂಸ್ಕೃತಿಯಲ್ಲಿ ತನ್ನ ಬಾಳಿನ ಬೇರುಗಳನ್ನು ಆಳವಾಗಿ ಬಿಟ್ಟು ನಿಂತದ್ದು. ಇತಿಹಾಸ, ಪುರಾಣ, ಆಖ್ಯಾಯಿಕೆಗಳ ಪ್ರಾಚೀನ ಅವಶೇಷಗಳ - ಮೊಹೆಂಜೊದಾರೊದಿಂದ ಹಾಳು ಹಂಪೆಯ ವರೆಗಿನ ಹೂತುಬಿದ್ದ ನಾಗರಿಕತೆಯ ಸ್ಥಳಗಳ, 'ಕೃಷ್ಣಾಕುಮಾರಿಯಂಥ' ವೀರಸ್ತ್ರೀಯ ಗಾಥೆಯ, ಫಿಲಿಫೈನ್ ಸ್ವಾತಂತ್ರ್ಯ ಸಮರದಲ್ಲಿ ಹುತಾತ್ಮರಾದ ಡಾ. ಜೋಸ್ ರಿಝ್ಹಾಲರ, 'ನಮ್ಮ ಕೊನೆಯ ಶರಣು'ದಂಥ ವೀರಗೀತದ ವಿಶೇಷ ಆಕರ್ಷಣೆ. ಈ ಕವಿಯ ಹಿಂದೆ ಬರಿ ರೋಮ್ಯಾಂಟಿಕ್ ಪ್ರಜ್ಞೆಯೊಂದೇ ಕೆಲಸ ಮಾಡಿದ್ದಲ್ಲ. ಅಲ್ಲಿಯ ಪ್ರೇರಣೆ ಮಾಹಾತ್ಮ್ಯದ ಮಹಿಮೆಯದು. ಮಾನವ್ಯತೆಯ ಮೂಲ್ಯ-ಗಳದು. ಈ ಪ್ರೇರಣೆಗೆ ಪ್ರಚೋದನೆ ಆಧುನಿಕ ಔದ್ಯೋಗಿಕ ನಾಗರಿಕತೆಯ ಆತ್ಮಶೂನ್ಯತೆ ಮತ್ತು ವ್ಯಾಪಾರೀ ವೃತ್ತಿಯ ಗ್ರಾಮ್ಯ ಭಾವಸಂಕರ, ಇವುಗಳ ತೀವ್ರ ಅಸಹ್ಯತೆ ಹಾಗೂ ನಿರಾಕರಣೆ. ಯೇಟ್ಸ್‌ನಲ್ಲಿಯೂ ಇದೇ ಪ್ರೇರಣೆ ಕಾವ್ಯದ, ಆ ಮೂಲಕ ಜೀವನದ ಕ್ರಾಂತಿಗೆ ಸ್ಫೂರ್ತಿ ಆಯಿತು. ಯೇಟ್ಸ್ ತನ್ನ ಪ್ರಜ್ಞಾವಂತಿಕೆಯ ಹೊಸ ಹರಯದಲ್ಲಿ ತನ್ನ ತಾಯ್ನಾಡಿನ, ಅಲ್ಲಿಯೂ ಐಯರ್ಲಂಡದ ಪಡುವಣ ಸೀಮೆಯ ಪುರಾಣ, ಐತಿಹ್ಯ, ಜಾನಪದ ಗೀತ, ವಿಚಿತ್ರ ನಂಬಿಗೆಗಳ, ಅಲ್ಲಿಯ ದೆವ್ವ-ಭೂತಗಳ 'ಸುಂದರ ಕಾಂಡ" ದಲ್ಲಿ ಆಳವಾಗಿ ಆಸಕ್ತನಾಗಿದ್ದನು. ಅಲ್ಲದೆ, ಅತಿ ಭೌತಿಕ ಹಾಗೂ ನಿಗೂಢ ಅನುಭವ ಪ್ರಯೋಗ ವಿದ್ಯೆಯಲ್ಲಿಯೂ ತೊಡಗಿದ್ದನು. ಅಂಬಿಕಾತನಯರೂ ಹೆಚ್ಚು-ಕಡಿಮೆ ಅದೇ ಹಾದಿಯಲ್ಲಿ ಹಾದು ಬಂದವರು. ಹಳ್ಳಿಯ ಬಾಳು, ಹಾಡು, ನಂಬಿಕೆ-ನಡಾವಳಿಗಳಲ್ಲಿ



Latest Sarkari Jobs, Govt Exam Results, Vacancies and updates on one click
Know More

ಅವರ ವ್ಯಾಸಂಗ ಗಾಢ ಮಾತ್ರವಲ್ಲ, ಈ ಪ್ರಾಚೀನ ವಿದ್ಯೆಯ ಆಸಕ್ತಿ ಅವರನ್ನು ವೇದ ವಾಙ್ಮಯದ ವರೆಗೂ ಒಯ್ದಿದೆ. ಯೇಟ್ಸ್ ಮುಂದೆ ಹಿಂದೂ ಬ್ರಹ್ಮವಿದ್ಯೆ (ಥಿಯೊಸೊಫಿ)ಯ ಪ್ರಭಾವಕ್ಕೆ ಒಳಗಾದ-ಶ್ರೀ ಮೋಹಿನಿ ಚಟರ್ಜಿಯ ಬರಹಗಳಿಂದಾಗಿ. ಅದಕ್ಕೆ ಭದ್ರವಾದ ಅಧ್ಯಾತ್ಮದ ಸಂಸ್ಕಾರ ಅಂಬಿಕಾತನಯರಿಗೆ ಅನೇಕ ಗುರುಗಳಿಂದ ಲಭಿಸಿತು - ರವೀಂದ್ರರಿಂದ, ಅರವಿಂದ, ಶ್ರೀಮಾತೆಯ ವರೆಗೂ, ಇಂದು ಸತ್ಯ ಸಾಯಿಬಾಬಾರ ತನಕವೂ ಈ ಆಕರ್ಷಣೆ ಅವರನ್ನು ಸೆಳೆದಿದೆ. ಹಿಂದೆ ಅತೀಂದ್ರಿಯ ಸಿದ್ಧಿಗಳ ಸಾಧನೆಗಾಗಿಯೂ ಅವರು ಕೃಷ್ಣಮೂರ್ತಿ, ಪಾಟೀಲ ಪ್ರಭೃತಿ ದೈವೋಪಾಸಕರಿಂದ ನಿರ್ದೇಶನ ಪಡೆದಿದ್ದರು.

ಇದೆಲ್ಲದರ ಪರಿಪಾಕವಾಗಿ ಈ ಕವಿಯ ನಿಸರ್ಗಪ್ರೇಮ, ದೇಶಪ್ರೇಮ, ಜಾನಪದಪ್ರೇಮ, ಸಂಪ್ರದಾಯಶ್ರದ್ಧೆ, ಇವೆಲ್ಲ ಬಿಡಿ ಬಿಡಿ, ಬೇರೆ ಬೇರೆ ಆಸಕ್ತಿ ವಿಷಯಗಳಾಗಿ, ಕೇವಲ ವಿಚಿತ್ರ ರಸಿಕತೆಯ ಇಲ್ಲವೆ ಭಾವುಕತೆಯ ಒಲವುಗಳಾಗಿ ಬೆಳೆಯಲಿಲ್ಲ. ಎಲ್ಲವೂ ಆಳವಾಗಿ ಏಕಾ-ತ್ಮತೆಯ ಪಿಂಡೀಕರಣವನ್ನು, ಸಾಮರಸ್ಯವನ್ನು ಹೊಂದಿದ್ದು ಆ ಒಂದು ಕೇಂದ್ರದೃಷ್ಟಿಯಿಂದಲೇ ಅವರ ಸಕಲ ಕಾವ್ಯವೂ, ಸಮಗ್ರ ದರ್ಶನವೂ ದೀಪ್ತಿಯನ್ನು ಪಡೆದಿದೆ.

**31.** ಈ ಲೇಖನದ ಪ್ರಧಾನ ಆಶಯ

(A) ಕವಿ ಯೇಟ್ಸ್‌ನ ಜೊತೆಗೆ ಕವಿ ಬೇಂದ್ರೆಯವರ ಕಾವ್ಯದ ತುಲನೆ
(B) ಕವಿ ಬೇಂದ್ರೆಯವರ ಕಾವ್ಯದ ವಿಶಿಷ್ಟತೆ
(C) ಕವಿ ಯೆಟ್ಸ್‌ನ ಕಾವ್ಯದ ವಸ್ತುವಿನ ಸ್ವರೂಪ
(D) ಬೇಂದ್ರೆ ಕಾವ್ಯದಲ್ಲಿ ಬರುವ ನಿಸರ್ಗ ಮತ್ತು ಆಧ್ಯಾತ್ಮಿಕತೆಯ ವರ್ಣನೆ

**32.** ನಿಸರ್ಗ ವರ್ಣನೆಯಲ್ಲಿ ಕವಿ ವರ್ಡ್ಸ್‌ವರ್ತ್ ಹಾಗೂ ಬೇಂದ್ರೆಯವರು

(A) ಸಮಾನ ಧ್ಯೇಯ ಧೋರಣೆಯವರು
(B) ವಿಭಿನ್ನ ದೃಷ್ಟಿಕೋನವುಳ್ಳವರು
(C) ಸಮಾನ ವರ್ಣನೆಯಂತೆ ತೋರಿದರೂ ವಿಭಿನ್ನ ದೃಷ್ಟಿಕೋನ ಹೊಂದಿದವರು
(D) ನಿಸರ್ಗವನ್ನೇ ಇಷ್ಟದೈವವೆಂದು ಭಾವಿಸಿದವರು

**33.** ಯೇಟ್ಸ್ ಕವಿಯಂತೆ ಬೇಂದ್ರೆಯವರ ಕಾವ್ಯದ ಸತ್ವವು

(i) ಪಾರಮಾರ್ಥಿಕವನ್ನು ತನ್ನ ಒಡಲಿನಲ್ಲಿ ಹೊಂದಿದೆ.
(ii) ಕಾವ್ಯ ಪ್ರತಿಮೆಯಾಚೆ ಪ್ರತೀಕತ್ವವನ್ನು ತಳೆದು ನಿಲ್ಲುತ್ತದೆ.
(iii) ವೈಜ್ಞಾನಿಕ ಬೌದ್ಧಿಕ ಚಿಂತನೆಯನ್ನು ಪ್ರಧಾನವಾಗಿ ತಳೆದಿದೆ.
(iv) ರೊಮ್ಯಾಂಟಿಕ್ ಪ್ರಜ್ಞೆಯೊಂದನ್ನೇ ಆಳದಲ್ಲಿ ಹೊಂದಿದೆ.

**ಇವುಗಳಲ್ಲಿ ಸರಿಯಾದ ಉತ್ತರ :**

(A) (i) ಮತ್ತು (iii)
(B) (i) ಮತ್ತು (ii)
(C) (ii) ಮತ್ತು (iii)
(D) (iv) ಮತ್ತು (i)



Latest Sarkari Jobs, Govt Exam Results, Vacancies and updates on one click
Know More

34. ಅಂಬಿಕಾತನಯರ ಕಾವ್ಯದ ಸತ್ವವು

(i) ಜನಪದ ಸಂಸ್ಕೃತಿಯಿಂದ ಮಾತ್ರ ಪ್ರೇರಣೆಗೊಂಡಿದೆ.

(ii) ವೇದ ವಾಙ್ಮಯದಿಂದಲೇ ಪ್ರಭಾವ ಪಡೆದಿದೆ.

(iii) ಜನಪದ ಸಂಸ್ಕೃತಿ ಹಾಗೂ ಪ್ರಾಚೀನ, ಅರ್ವಾಚೀನ ಆಧ್ಯಾತ್ಮವಿದ್ಯೆಯ ಆಸಕ್ತಿಯ ಮೇಳದಿಂದ ರೂಪುಗೊಂಡಿದೆ.

(iv) ಅತಿಭೌತಿಕ, ನಿಗೂಢ ಅನುಭವ ಹಾಗೂ ಐತಿಹ್ಯ ಹಾಗೂ ಜಾನಪದ ದಿಂದ ಪ್ರೇರಣೆಯನ್ನು ಪಡೆದಿದೆ.

**ಇವುಗಳಲ್ಲಿ ಸರಿಯಾದ ಉತ್ತರ :**

(A) (iii) ಮತ್ತು (iv)

(B) (i) ಮತ್ತು (ii)

(C) (iii) ಮತ್ತು (i)

(D) (iv) ಮತ್ತು (i)

35. ಯೇಟ್ಸ್ ಮತ್ತು ಬೇಂದ್ರೆಯವರ ಕಾವ್ಯಗಳು

(A) ರಸಿಕತೆ ಹಾಗೂ ಭಾವನಾತ್ಮಕ ಒಲವನ್ನು ಮಾತ್ರ ಪ್ರತಿಪಾದಿಸಿದವು.

(B) ರಸಿಕತೆ ಮತ್ತು ಭಾವನಾತ್ಮಕ ನೆಲೆಯನ್ನು ದರ್ಶನದ ಒಂದು ಕೇಂದ್ರದೃಷ್ಟಿಗೆ ತಂದವು.

(C) ನೈಸರ್ಗಿಕ ವಿವರಗಳನ್ನು ಪುರಾಣ, ಐತಿಹ್ಯಗಳಾಗಿ ಪರಿವರ್ತಿಸಿದವು

(D) ಟೆನಿಸನ್, ಬ್ರೌನಿಂಗ್ ಅವರ ಕಾವ್ಯಗಳನ್ನು ಅನುಸರಿಸಿದವು.

**ಹೇಳಿಕೆ - ವಿವರಣೆ ಆಧಾರಿತ ಬಹುಆಯ್ಕೆಯ ಮಾದರಿ**

36. **ಹೇಳಿಕೆ** : ನುಡಿದರೆ ಮುತ್ತಿನ ಹಾರದಂತಿರ ಬೇಕು :

**ವಿವರಣೆ** : ನಮ್ಮ ಮಾತುಗಳು ಕೇಳಲು ಇಂಪಾಗಿ ಅರ್ಥಪೂರ್ಣವಾಗಿಯೂ-ಇರಬೇಕು.

(A) ಹೇಳಿಕೆ ಸರಿ ವಿವರಣೆ ತಪ್ಪು

(B) ಹೇಳಿಕೆ ತಪ್ಪು ವಿವರಣೆ ಸರಿ

(C) ಹೇಳಿಕೆ ಸರಿ ವಿವರಣೆ ಸರಿ

(D) ಹೇಳಿಕೆ ತಪ್ಪು ವಿವರಣೆ ತಪ್ಪು

37. **ಹೇಳಿಕೆ** : ನೆಗಳ್ದಾದಿಪುರಾಣ ದೊಳಱಿವುದು ಕಾವ್ಯಧರ್ಮಮುಮಂ ಧರ್ಮಮುಮಂ.

**ವಿವರಣೆ** : ಪ್ರಸಿದ್ಧವಾದ ಈ ಆದಿಪುರಾಣದ ಕಾವ್ಯಧರ್ಮದಲ್ಲಿ ಧರ್ಮವನ್ನು ಅರಿಯಬಹುದಾಗಿದೆ.

(A) ಹೇಳಿಕೆ ತಪ್ಪು ವಿವರಣೆ ತಪ್ಪು

(B) ಹೇಳಿಕೆ ಸರಿ ವಿವರಣೆ ತಪ್ಪು

(C) ಹೇಳಿಕೆ ಸರಿ ವಿವರಣೆ ಸರಿ

(D) ಹೇಳಿಕೆ ತಪ್ಪು ವಿವರಣೆ ಸರಿ

38. **ಹೇಳಿಕೆ** : ಸಾಲವನು ಕೊಂಬಾಗ ಹಾಲೋಗರುಂಡಂತೆ.

**ವಿವರಣೆ** : ಸಾಲವನ್ನು ಪಡೆಯುವಾಗ ಹಾಲನ್ನು ಒಗರನ್ನು ಉಂಡಷ್ಟು ಆನಂದವಾಗುತ್ತದೆ.

(A) ಹೇಳಿಕೆ ಸರಿ ವಿವರಣೆ ತಪ್ಪು

(B) ಹೇಳಿಕೆ ತಪ್ಪು ವಿವರಣೆ ಸರಿ

(C) ಹೇಳಿಕೆ ಸರಿ ವಿವರಣೆ ಸರಿ

(D) ಹೇಳಿಕೆ ತಪ್ಪು ವಿವರಣೆ ಸರಿ



Latest Sarkari Jobs, Govt Exam Results, Vacancies and updates on one click
Know More

**39.** **ಹೇಳಿಕೆ** : ವೀರ ನಾರಾಯಣನೆ ಕವಿ ಲಿಪಿಕಾರ ಕುವರ ವ್ಯಾಸ.

**ವಿವರಣೆ** : ವೀರ ನಾರಾಯಣನೆ ನಿಜವಾದ ಕವಿ ಬರೆದುಕೊಂಡವನು ಕುಮಾರವ್ಯಾಸ

(A) ಹೇಳಿಕೆ ತಪ್ಪು ವಿವರಣೆ ತಪ್ಪು

(B) ಹೇಳಿಕೆ ಸರಿ ವಿವರಣೆ ತಪ್ಪು

(C) ಹೇಳಿಕೆ ಸರಿ ವಿವರಣೆ ಸರಿ

(D) ಹೇಳಿಕೆ ತಪ್ಪು ವಿವರಣೆ ಸರಿ

**40.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಭೈರಪ್ಪ - ಗಾಂಧಿ ಬಂದ

(B) ತೇಜಸ್ವಿ - ಮಾಯಾಲೋಕ

(C) ಎಂ. ಕೆ. ಇಂದಿರಾ - ಕವಲು

(D) ವೈದೇಹಿ - ಚಪ್ಪಲಿಗಳು

**41.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದುವುದಿಲ್ಲ ?

(A) ಬಸವಣ್ಣನವರು - ಕಲಬುರ್ಗಿ

(B) ಸಂಶೋಧನ ತರಂಗ - ಚಿದಾನಂದ ಮೂರ್ತಿ

(C) ಮಹಾಕಾವ್ಯಲಕ್ಷಣಗಳು - ವೆಂಕಟಾಚಲ ಶಾಸ್ತ್ರಿ

(D) ತೀನಂಶ್ರೀ - ಕನ್ನಡಮಧ್ಯಮವ್ಯಾಕರಣ

**42.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿ ಹೊಂದುವುದಿಲ್ಲ ?

(A) ಲಿಯೊ ಟಾಲ್‌ಸ್ಟಾಯ್ - ರಿಸರಕ್ಷನ್

(B) ಕಾಮು - ವಾರ್ ಎಂಡ್ ಪೀಸ್

(C) ಬ್ರೆಕ್ಟ್ - ಗೆಲಿಲಿಯೊ

(D) ಕಾಫ್ಕ - ಮೆಟಮಾರ್ಫಸಿಸ್

**43.** ಈ ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ವಿಶ್ವನಾಥ - ಸಾಹಿತ್ಯ ದರ್ಪಣ

(B) ಮಮ್ಮಟ - ಕಾವ್ಯಾದರ್ಶ

(C) ಆನಂದವರ್ಧನ - ಕಾವ್ಯಾಲಂಕಾರ

(D) ದಂಡಿ - ಕಾವ್ಯ ಪ್ರಕಾಶ

**44.** ಕೆಳಗಿನ ಜೋಡಿಗಳಲ್ಲಿ ಯಾವುದು ಸರಿಯಾಗಿ ಹೊಂದಿಕೆಯಾಗುತ್ತದೆ ?

(A) ಸಮುದ್ರದ - ಸಪ್ತಮೀ

(B) ಸಮುದ್ರಂ - ಪಂಚಮೀ

(C) ಸಮುದ್ರಕ್ಕೆ - ಚತುರ್ಥೀ

(D) ಸಮುದ್ರದಿಂದ - ಷಷ್ಠೀ

**45.** **ಬಹು ಆಯ್ಕೆಯ ಜೋಡಣೆ**

| | | | |
|---|---|---|---|
| (a) | ಪೊನ್ನ | (i) | ಜಗನ್ನಾಥ ವಿಜಯ |
| (b) | ನಯಸೇನ | (ii) | ಪ್ರಭುಲಿಂಗ ಲೀಲೆ |
| (c) | ರುದ್ರಭಟ್ಟ | (iii) | ಧರ್ಮಾಮೃತ |
| (d) | ಚಾಮರಸ | (iv) | ಶಾಂತಿ ಪುರಾಣ |
| | | (v) | ಅಜಿತ ಪುರಾಣ |

**ಇವುಗಳಲ್ಲಿ ಸರಿಯಾದ ಉತ್ತರ** :

| | (a) | (b) | (c) | (d) |
|---|---|---|---|---|
| (A) | (iv) | (iii) | (i) | (ii) |
| (B) | (iv) | (iii) | (ii) | (i) |
| (C) | (iv) | (ii) | (iii) | (i) |
| (D) | (iii) | (i) | (iv) | (ii) |



Latest Sarkari Jobs, Govt Exam Results, Vacancies and updates on one click
Know More

46. (a) ಎಚ್.ವಿ. ಸಾವಿತ್ರಮ್ಮ (i) ಹೂ ಹಣ್ಣು
(b) ತ್ರಿವೇಣಿ (ii) ನಿರಾಶ್ರಿತೆ
(c) ವೀಣಾ ಶಾಂತೇಶ್ವರ (iii) ಎರಡು ಕನಸು
(d) ವಾಣಿ (iv) ಮುಳ್ಳುಗಳು
(v) ಸಂಕೋಲೆಯೊಳಗಿಂದ

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | (i) | (ii) | (iii) | (iv) |
| (B) | (iv) | (ii) | (iii) | (i) |
| (C) | (ii) | (i) | (iv) | (iii) |
| (D) | (i) | (iv) | (iii) | (ii) |

47. (a) ಸಿಮೋನ್ ದಿ. ಬೊವಾ (i) ಈಸ್ತೆಟಿಕ್
(b) ಎಜ್ರಾ ಪೌಂಡ್ (ii) ಕ್ಯಾಂಟೊಸ್
(c) ಕ್ರೋಚೆ (iii) ಆನ್ ದಿ ಸಬ್‌ಲೈಮ್
(d) ಮ್ಯಾಥ್ಯು ಅರ್ನಾಲ್ಡ್ (iv) ದಿ ಸೆಕೆಂಡ್ ಸೆಕ್ಸ್
(v) ಪ್ರಿಫೇಸ್ ಟು ಪೋಯೆಮ್ಸ್

ಇವುಗಳಲ್ಲಿ ಸರಿಯಾದ ಉತ್ತರ :

| | (a) | (b) | (c) | (d) |
|---|---|---|---|---|
| (A) | (i) | (ii) | (iv) | (iii) |
| (B) | (ii) | (i) | (v) | (iv) |
| (C) | (iii) | (i) | (v) | (iv) |
| (D) | (iv) | (ii) | (i) | (v) |

**ಅನುಕ್ರಮ ಮಾದರಿ**

**ಈ ಕೆಳಗಿನ ಕಾಲಾನುಕ್ರಮ ಸರಣಿಗಳಲ್ಲಿ ಸರಿಯಾದ ಉತ್ತರವನ್ನು ಗುರುತಿಸಿ**

48. (A) ಅದ್ಭುತ ರಾಮಾಯಣ, ನಟಸಾರ್ವಭೌಮ, ಮುದ್ರಾಮಂಜೂಷ, ಚಕೋರಿ.
(B) ಮುದ್ರಾಮಂಜೂಷ, ಅದ್ಭುತ ರಾಮಾಯಣ, ನಟಸಾರ್ವಭೌಮ, ಚಕೋರಿ
(C) ಮುದ್ರಾಮಂಜೂಷ, ನಟಸಾರ್ವಭೌಮ, ಅದ್ಭುತ ರಾಮಾಯಣ, ಚಕೋರಿ
(D) ಅದ್ಭುತ ರಾಮಾಯಣ, ಮುದ್ರಾಮಂಜೂಷ, ಚಕೋರಿ, ನಟಸಾರ್ವಭೌಮ

49. (A) ಮಹಾದೇವಿಯಕ್ಕ, ಹರಿಹರ, ಆಂಡಯ್ಯ, ಭೀಮಕವಿ
(B) ಮಹಾದೇವಿಯಕ್ಕ, ಆಂಡಯ್ಯ, ಹರಿಹರ, ಭೀಮಕವಿ
(C) ಮಹಾದೇವಿಯಕ್ಕ, ಹರಿಹರ, ಭೀಮಕವಿ, ಆಂಡಯ್ಯ
(D) ಹರಿಹರ, ಮಹಾದೇವಿಯಕ್ಕ, ಆಂಡಯ್ಯ, ಭೀಮಕವಿ

50. (A) ಗುಲವಾಡಿ ವೆಂಕಟರಾವ್, ತರಾಸು, ಬೆಟಗೇರಿ ಕೃಷ್ಣಶರ್ಮ, ಆಲನಹಳ್ಳಿ ಕೃಷ್ಣ
(B) ಗುಲವಾಡಿ ವೆಂಕಟರಾವ್, ತರಾಸು, ಆಲನಹಳ್ಳಿ ಕೃಷ್ಣ, ಬೆಟಗೇರಿ ಕೃಷ್ಣ ಶರ್ಮ
(C) ಗುಲವಾಡಿ ವೆಂಕಟರಾವ್, ಬೆಟಗೇರಿ ಕೃಷ್ಣಶರ್ಮ, ತರಾಸು, ಆಲನಹಳ್ಳಿ ಕೃಷ್ಣ
(D) ಬೆಟಗೇರಿ ಕೃಷ್ಣಶರ್ಮ, ಗುಲವಾಡಿ ವೆಂಕಟರಾವ್, ತರಾಸು, ಆಲನಹಳ್ಳಿ ಕೃಷ್ಣ



Latest Sarkari Jobs, Govt Exam Results, Vacancies and updates on one click
Know More

prepp

# Latest Sarkari jobs, Govt Exam alerts, Results and Vacancies

- Latest News and Notification
- Exam Paper Analysis
- Topic-wise weightage
- Previous Year Papers with Answer Key
- Preparation Strategy & Subject-wise Books

To know more **Click Here**

www.prepp.in